ಉತ್ತರವನ್ನು ಕೊಡುತ್ತಿದ್ದುದನ್ನು ನಾವು ಕೇಳುತ್ತಿದ್ದೆವು. ಆದರೆ ನನ್ನ ಕ್ಷೇತ್ರದಲ್ಲಿ ದಿನಾಂಕ: 27-7-97ರಂದು ಸುಮಾರು ನಾಲ್ಕು ಲಾರಿಗಳು, ಲೈಲ್ಯಾಂಡ್ ಲಾರಿಗಳಲ್ಲಿ ಸಾಗಿಸುತ್ತಿದ್ದಂತಹ ಮದ್ಯವನ್ನು ಅರಣ್ಯ ಇಲಾಖೆಯವರು ಹಿಡಿದು ಕೇಸ್ ದಾಖಲು ಮಾಡಿದ್ದಾರೆ. ಈ ಲಾರಿಗಳು ಬಂದಂತಹ ಇನ್‌ವಾಯ್ಸ್‌ನಲ್ಲಿ ಮದ್ರಾಸ್‌ನಿಂದ ಮಹಾರಾಷ್ಟ್ರಕ್ಕೆ ಹೋಗುವಂತಹ ಕೆಮಿಕಲ್ಸ್ ಬಾಕ್ಸ್ ಇಟ್ಟುಕೊಂಡು ಹೋಗುತ್ತಿದ್ದೇವೆಂದು ಇತ್ತು. ಈ ನಾಲ್ಕು ಲಾರಿಗಳು ಸಹ ಕರ್ನಾಟಕ ರಾಜ್ಯದ್ದೇ ಆಗಿರುತ್ತದೆ. ಅವುಗಳ ನಂಬರ್ ಸಿಎಎಸ್ 2161, ಕೆ ಎ 1263, ಕೆಎ 05 ಬಿ 5040, ಕೆಎ 05 ಬಿ 9369 ಹಾಗೂ ಮತ್ತೊಂದು ಲಾರಿ ಹೀಗೆ ಅಬಕಾರಿ ದೊರೆಗಳಿಂದ ಉತ್ಪತ್ತಿಯಾದಂತಹ ಮದ್ಯವನ್ನು ಸಾಗಿಸುವಂತಹ ಕೆಲಸ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಇದರ ಬಗ್ಗೆ ಈಗಾಗಲೇ ಅರಣ್ಯ ಇಲಾಖೆಯವರು ಪೋಲೀಸ್‌ನವರ ನೆರವಿನಿಂದ ಲಾರಿಗಳನ್ನು ಹಿಡಿದು ಕೇಸ್ ಅನ್ನು ಬುಕ್ ಮಾಡಿದ್ದಾರೆ. ಇದನ್ನು ಬುಕ್ ಮಾಡಿದ ಮೇಲೆ ಮುಂದಿನ ಕ್ರಮ ಏನು ತೆಗೆದುಕೊಂಡಿದ್ದಾರೆಂಬುದು ಗೊತ್ತಿಲ್ಲ. ಇದರ ಜೊತೆಗೆ ಈ ಲಾರಿಗಳ ಬುಕ್ಕಿಂಗ್ ಆಫೀಸ್ ಏನು ಇದೆ, ಅವರು ಬೋಗಸ್ ಇನ್‌ವಾಯಸ್ ಅನ್ನು ಮಾಡಿ ಇದು ಮದ್ರಾಸ್‌ನಿಂದ ಮಹಾರಾಷ್ಟ್ರಕ್ಕೆ ಹೋಗುವಂತಹ ಕೆಮಿಕಲ್ಸ್ ಬಾಕ್ಸ್ ಎಂದು ಹೇಳಿ ಸೃಷ್ಟಿ ಮಾಡಿರುತ್ತಾರೆ. ಆದರೆ ಅದನ್ನು ತೆಗೆದು ನೋಡಿದರೆ ಅದರಲ್ಲಿ 'ರಮ್' ಇದೆ. ಈ ರೀತಿಯಾಗಿ ಸರ್ಕಾರಕ್ಕೆ ವಂಚನೆ ಮಾಡಿಕೊಂಡು ಕಳುಹಿಸುವಂಥಾದ್ದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಇದರ ಹಿಂದೆ ಯಾರು ಇದ್ದಾರೆ ಅವರು ಶ್ರೀಮಂತರು, ಡಿಸ್ಟಿಲರಿಗಳಿರಬಹುದು, ಅವರ ಬಗ್ಗೆ ಉಗ್ರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಜೊತೆಗೆ ಈ ಬೋಗಸ್ ಇನ್‌ವಾಯ್ಸ್ ಏನು ಸೃಷ್ಟಿ ಮಾಡಿದ್ದಾರೆ, ಅವರನ್ನೂ ಸಹ ಶಿಕ್ಷೆಗೆ ಗುರಿ ಮಾಡಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಮಾಹಿತಿಯನ್ನು ತರಿಸಿ ಅವರಿಗೆ ಉತ್ತರವನ್ನು ಕೊಡುತ್ತೇನೆ.

(ಐ) 1996-97ನೇ ಸಾಲಿಗೆ ಸಾರಾಯಿ ಹರಾಜು ಆಗದಿರುವುದು.

ಶ್ರೀ ವೈಜನಾಥ್ ಮಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೆ, 1996-97ನೇ ವರ್ಷಕ್ಕೆ ಸುಮಾರು ನಾಲ್ಕೈದು ತಿಂಗಳುಗಳು ಎಕ್ಸೈಜ್ ಆಕ್ಷನ್ ಆಗಿದೆ, ಅರ್ಯಾಕ್ ಆಕ್ಷನ್ ಆಗಿಲ್ಲ. ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆಂದರೆ 2-3 ವರ್ಷಗಳಿಂದ ಇಲ್ಲ, ಹೊಸ ಎಕ್ಸೈಜ್ ಪಾಲಿಸಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಪ್ರತಿ ವರ್ಷ ಎಕ್ಸೈಜ್ ಪಾಲಿಸಿಯನ್ನು ಮಾಡುವುದೆಂದರೆ ಬರೀ ಎಕ್ಸೈಜ್ ಕಂಟ್ರಾಕ್ಟರ್‌ದಾರರಿಗೆ ಲಾಭ

ಮಾಡುವ ಸಲುವಾಗಿ ಎಕ್ಸೈಜ್ ಪಾಲಿಸಿ ಇದೆ ಏನೋ ಎಂದನಿಸುತ್ತದೆ. ಏಕೆಂದರೆ ಹೋದ ವರ್ಷ 35ಕೋಟಿ ರೂಪಾಯಿಗಳು ಸರ್ಕಾರಕ್ಕೆ ಲಾಸ್ ಆಯಿತು. ನಾಲ್ಕೈದು ತಿಂಗಳು ಹರಾಜು ಮಾಡಿ ಈ ವರ್ಷ ಕೂಡ ಹೋದ ಮೇ ಅಥವಾ ಜೂನ್ ತಿಂಗಳಲ್ಲಿ ಹರಾಜು ಮಾಡಬೇಕಾಗಿತ್ತು; ಆದರೆ ಮಾಡಿಲ್ಲ. ಕೊನೆಗೆ ಜುಲೈ 21ನೇ ದಿನಾಂಕದಂದು ಇಡೀ ರಾಜ್ಯದಲ್ಲಿ ಈ ಒಂದು ದಿನಾಂಕದಲ್ಲೇ ಆ್ಯಕ್ಷನ್‌ಗೆ ಇಟ್ಟರು, ಅಂದರೆ ಒಂದು ಕಡೆ ಕಾಂಪೀಟ್ ಮಾಡುವವರು ಮತ್ತೊಂದು ಕಡೆ ಹೋಗಬಾರದು. ಅದು ಸಿಸ್ಟಮ್ಯಾಟಿಕ್ ಆಗಿ ಹರಾಜು ಆಗಬಾರದು, ಹರಾಜು ಆಗಿಲ್ಲವೆಂದು ಅವರಿಗೆಲ್ಲಾ ಕಮೀಷನ್ ಕೊಡುವುದು, ಇದು ಸಿಸ್ಟಮ್ಯಾಟಿಕ್ ಆಗಿ ಈ ಹೆಂಡದ ದೊರೆಗಳಿಗೆ ಲಾಭ ಮಾಡುವಂಥಾದ್ದು ಒಂದು ಸರ್ಕಾರದ ನೀತಿ ಆಗಿದೆ. ಇದರಿಂದ ಜುಲೈ ಒಂದು ತಿಂಗಳಲ್ಲೇ ರೆಕಾರ್ಡ್ ಪ್ರಕಾರ ಸರ್ಕಾರಕ್ಕೆ ಮೂರೂವರೆ ಕೋಟಿ ರೂಪಾಯಿಗಳು ಲಾಸ್ ಆಗಿದೆ. ಪ್ರತಿ ವರ್ಷ ಅವರಿಗೆ ಶೇ.10, ಶೇ 12ರಷ್ಟು ಹೆಚ್ಚು ಮಾಡಿ ಕೊಡುತ್ತಾರೆಂದು ಕೇಳಿದ್ದೆವು. ಆದರೆ ಈ ವರ್ಷ ಶೇ. 12ರಷ್ಟು ಕಡಿಮೆ ಮಾಡಿ ಇದ್ದ ಕಂಟ್ರಾಕ್ಟ್‌ದಾರರಿಗೆ ರೆಗ್ಯೂಲರೈಸ್ ಮಾಡಿದ್ದಾರೆಂದು ಗೊತ್ತಾಗಿದೆ. ಇದು ಯಾವ ನೀತಿಯೆಂಬುದು ಗೊತ್ತಿಲ್ಲ. ಈ ರೀತಿ ಹೊಸ ಎಕಾನಾಮಿಕ್ ಪಾಲಿಸಿಯಿಂದ ನಮ್ಮ ಇಡೀ ದೇಶದ ಎಕಾನಮಿ ಹಾಳಾಯಿತು. ನಮ್ಮ ಈ ಹೊಸ ಎಕ್ಸೈಜ್ ಪಾಲಿಸಿಯಿಂದ ಕರ್ನಾಟಕದ ಎಕಾನಮಿ ಎಲ್ಲಾ ಹಾಳು ಮಾಡುವಂಥಾದ್ದು ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಎಕ್ಸೈಜ್ ಪಾಲಿಸಿಯಲ್ಲಿ, ಇದು ಲಿಬರಲೈಜ್ ಪಾಲಿಸಿ, ಇದರಿಂದ ಹೆಚ್ಚಿನ ಇನ್‌ವೆಸ್ಟ್‌ಮೆಂಟ್ ಬರುತ್ತದೆ.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದು ಎಕಾನಾಮಿಕ್ ಪಾಲಿಸಿ, ಇದು ಎಕ್ಸೈಜ್ ಪಾಲಿಸಿ ಇದು ಎರಡೂ ಲಿಬರಲೈಸ್, ಆದುದರಿಂದ ಸರ್ಕಾರ ಹಣ ಕಡಿಮೆ ಬಂತು ಎಂದು ಟ್ಯಾಕ್ಸ್‌ಗಳು, ಕೆ.ಇ.ಬಿ. ಬಿಲ್‌ಗಳು ರೈತರ ಮೇಲೆ ಹಾಕುವಂಥಾದ್ದು ಮತ್ತು ಕೆಎಸ್‌ಆರ್‌ಟಿಸಿಯ ಮೇಲೆ ಹಾಕುವಂಥಾದ್ದು ಮಾಡುವುದು. ಆ ದೃಷ್ಟಿಯಿಂದ ಇದರ ಬಗ್ಗೆ ಸರ್ಕಾರ ಎಷ್ಟು ಲಾಸ್ ಆಗಿದೆ ಎಂಬ ಬಗ್ಗೆ ಉತ್ತರವನ್ನು ಕೊಡಬೇಕು.

+ ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಸಾರ): ರಾಜ್ಯದಲ್ಲಿ ಪಾನ ನಿಷೇಧ ಪುನಃ ಜಾರಿಗೆ ತರುವ ಕುರಿತು ಪರಿಶೀಲಿಸಲು ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದೆ. ಉಪ ಸಮಿತಿಯ ಶಿಫಾರಸ್ಸುಗಳನ್ನು ಕಾಯ್ದಿರಿಸಿ, 1996-97ನೇ ಅಬಕಾರಿ ವರ್ಷದಲ್ಲಿ ಜುಲೈನಿಂದ ಅಕ್ಟೋಬರ್‌ವರೆಗೆ ಹಿಂದಿನ ವರ್ಷದ ಗುತ್ತಿಗೆದಾರರಿಗೆ ಆ ವರ್ಷದ ಬಾಡಿಗೆಗಿಂತ ಶೇಕಡ 8ರಷ್ಟು ಹೆಚ್ಚಿಗೆ ಬಾಡಿಗೆ ಮೊತ್ತಕ್ಕೆ ಗುತ್ತಿಗೆಯನ್ನು ನಡೆಸಲು ಸರ್ಕಾರವು ಅನುಮತಿ ನೀಡಿತ್ತು. ತದನಂತರ ಸದರಿ ವ್ಯವಸ್ಥೆಯನ್ನು ದಿನಾಂಕ 30-11-96ರವರೆಗೆ ಸರ್ಕಾರವು ವಿಸ್ತರಿಸಿತು. ಆದರೆ ಈ ತಾತ್ಕಾಲಿಕ ವ್ಯವಸ್ಥೆಯಲ್ಲಿ ಕೇವಲ

68 ತಾಲ್ಲೂಕಿನ ಗುತ್ತಿಗೆದಾರರು ಮಾತ್ರ ಶೇಕಡ 8 ರಷ್ಟು ಹೆಚ್ಚಿಗೆ ನೀಡಿ ಸಾರಾಯಿ ವ್ಯಾಪಾರವನ್ನು ಮುಂದುವರೆಸಿರುತ್ತಾರೆ. ಉಳಿದ 67 ತಾಲ್ಲೂಕುಗಳಲ್ಲಿ 1995-96ರ ಗುತ್ತಿಗೆ ಹಣದಲ್ಲಿ ಸಾರಾಯಿ ವ್ಯಾಪಾರವನ್ನು ಮುಂದುವರೆಸಿರುತ್ತಾರೆ. ಮತ್ತು 38 ತಾಲ್ಲೂಕುಗಳ ಬಗ್ಗೆ ಯಾವುದೇ ಗುತ್ತಿಗೆದಾರರು ಮುಂದೆ ಬರದ ಪ್ರಯುಕ್ತ ಇಲಾಖೆ ಮುಖಾಂತರ ಸಾರಾಯಿ ವ್ಯಾಪಾರವನ್ನು ಮುಂದುವರೆಸಲಾಗಿತ್ತು. ನಂತರ ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸಿನ ಅನ್ವಯ 1996-97ನೇ ವರ್ಷದಲ್ಲಿ 1-12-86ರಿಂದ 30-6-97 ರ ವರೆಗೂ ರಾಜ್ಯದ 173 ತಾಲ್ಲೂಕುಗಳಲ್ಲಿ (ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು, ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕುಗಳಲ್ಲಿ ಸಾರಾಯಿ ವ್ಯಾಪಾರವನ್ನು ನಿಷೇಧಿಸಿದ ಪ್ರಯುಕ್ತ ಅವುಗಳನ್ನು ಹೊರತು ಪಡಿಸಿ) ಹರಾಜು ನಡೆಸಲಾಯಿತು. ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನಲ್ಲಿ 1995-96ರ ಗುತ್ತಿಗೆದಾರರು ಸ್ಥಳೀಯ ನ್ಯಾಯಾಲಯದ ಆದೇಶದಂತೆ 1996-97ರಲ್ಲಿ ಗುತ್ತಿಗೆಯನ್ನು ಪೂರ್ಣ ವರ್ಷ ನಡೆಸಿರುತ್ತಾರೆ. ಸದರಿ ವರ್ಷದಲ್ಲಿ ಬೆಂಗಳೂರು (ನಗರ) ಜಿಲ್ಲೆಗೆ ಯಾವುದೇ ಗುತ್ತಿಗೆದಾರರು ಗುತ್ತಿಗೆಯನ್ನು ಪಡೆಯಲು ಉತ್ಸಾಹವನ್ನು ತೋರಿಸದೇ ಇರುವ ಪ್ರಯುಕ್ತ ಇಲಾಖಾ ಮೂಲಕ 1996-97ರ ಪೂರ್ಣ ವರ್ಷದಲ್ಲಿ ಸಾರಾಯಿ ವ್ಯಾಪಾರವನ್ನು ಅಲ್ಲಿ ಮುಂದುವರೆಸಲಾಗಿದೆ. 1996-97ನೇ ಅಬಕಾರಿ ವರ್ಷದಲ್ಲಿ ಹರಾಜಿನಲ್ಲಿ ರಾಜ್ಯ ಸರ್ಕಾರಕ್ಕೆ ಮಾಹೆಯಾನ ಈ ಕೆಳಕಂಡಂತೆ ಆದಾಯ ಬಂದಿರುತ್ತದೆ.

ಡಿಸೆಂಬರ್	-	41.68 ಕೋಟಿ ರೂ.ಗಳು
ಜನವರಿ	-	41.95 " "
ಫೆಬ್ರವರಿ	-	41.58 " "
ಮಾರ್ಚ್	-	41.56 " "
ಏಪ್ರಿಲ್	-	41.83 " "
ಮೇ	-	41.75 " "
ಜೂನ್	-	41.83. " "

ಪ್ರಸ್ತುತ ಅಬಕಾರಿ ವರ್ಷದಲ್ಲಿ ಜುಲೈ ಮಾಹೆಯಲ್ಲಿ ಹರಾಜು ಮಾಡಿರುವುದಿಲ್ಲ. ಆ ತಿಂಗಳಲ್ಲಿ ಪ್ರಸ್ತುತ ಗುತ್ತಿಗೆದಾರರಿಗೆ 1996-97ರಲ್ಲಿ ಇದ್ದ ಬಾಡಿಗೆ ಮೊತ್ತಕ್ಕೆ ಸಾರಾಯಿ ಮಾರಾಟ ಮಾಡಲು ಪಹಿಸಲಾಯಿತು. 33 ತಾಲ್ಲೂಕುಗಳಲ್ಲಿ ಪ್ರಸ್ತುತ ಗುತ್ತಿಗೆದಾರರು 1996-97ರ ಬಾಡಿಗೆ ಮೊತ್ತ ಸಾರಾಯಿ ಮಾರಾಟ ಮಾಡಲು ಮುಂದೆ ಬಾರದಿದ್ದ ಕಾರಣ ಅಲ್ಲಿ ಇಲಾಖಾ ಮುಖಾಂತರ ಮಾರಾಟ ನಿರ್ವಹಿಸಲಾಯಿತು. 1996-97ನೇ

ವರ್ಷದಲ್ಲಿ ರಾಜ್ಯ ಸರ್ಕಾರಕ್ಕೆ ಸಾರಾಯಿ ಗುತ್ತಿಗೆ ಬಾಬ್ತು ಜುಲೈ ತಿಂಗಳಿನಲ್ಲಿ 36.97 ಕೋಟಿ. ರೂ.ಗಳು ಸಂದಾಯವಾಗಿರುತ್ತದೆ. 1997-98ನೇ ವರ್ಷದ ಜುಲೈ ತಿಂಗಳಿನಲ್ಲಿ ಸರ್ಕಾರಕ್ಕೆ 39.87 ಕೋಟಿ ರೂ.ಗಳು ಆದಾಯ ಸರ್ಕಾರಕ್ಕೆ ಬಂದಿರುತ್ತದೆ. ಈ ಕಾರಣದಿಂದ ಹಿಂದಿನ ವರ್ಷದ ಜುಲೈ ತಿಂಗಳಿನಲ್ಲಿ ಬಂದ ಆದಾಯವನ್ನು ಗಣನೆಗೆ ತೆಗೆದುಕೊಂಡಲ್ಲಿ ರಾಜ್ಯ ಸರ್ಕಾರಕ್ಕೆ 2.9 ಕೋಟಿ ರೂ.ಗಳಷ್ಟು ಹೆಚ್ಚಿನ ಆದಾಯ ಬಂದಿರುತ್ತದೆ.

ಪ್ರಸ್ತುತ ವರ್ಷ ಆಗಸ್ಟ್ 1ರಿಂದ ಅಕ್ಟೋಬರ್ 31ರವರೆಗೆ 168 ತಾಲ್ಲೂಕು (ಪ್ರದೇಶಗಳನ್ನು) ಹರಾಜು ಮೂಲಕ ವಿಲೇವಾರಿ ಮಾಡಿದ್ದು ಕಳೆದ ಸಾಲಿಗಿಂತ ರೂ. 1.12 ಕೋಟಿ ಹಣ ಕಡಿಮೆ ಬಂದಿದೆ. ಇದಕ್ಕೆ ಕಾರಣ ಮಳೆಗಾಲ ಹಾಗೂ ಮೂರು ತಿಂಗಳಿಗೆ ಮಾತ್ರ ಹರಾಜು ಮಾಡಿರುವುದರಿಂದ ಶೇಕಡ 2.97ರಷ್ಟು ಹಣ ಕಡಿಮೆಯಾಗಿದೆ. ಕಾರವಾರ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ 4-5 ಬಾರಿ ಹರಾಜು ನಡೆಸಿದ್ದರೂ ಉತ್ಸಾಹದಾಯಕವಾದ ಸವಾಲುಗಳು ಬಂದಿಲ್ಲವಾದ್ದರಿಂದ ಇಲಾಖಾ ಮುಖಾಂತರ ಸಾರಾಯಿ ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

1.40 ಪಿ.ಎಂ

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ: ಇವರ ನೀತಿಯಿಂದ ಸುಮಾರು ಇನ್ನೂರು ಕೋಟಿ ರೂಪಾಯಿಗಳು ಇಲ್ಲಿಯವರೆಗೆ ನಷ್ಟವಾಗಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗ ವೈದ್ಯನಾಥ ಪಾಟೀಲರು ಏನು ವಿಷಯವನ್ನು ಎತ್ತಿದ್ದಾರೆ ಅದಕ್ಕೆ ಹೇಳುತ್ತಿದ್ದೇನೆ. 1995-96, 96-97 and 97-98ರಲ್ಲಿ because of your policy, because of your announcement, nearly Rs.200 Crores..

ಅಧ್ಯಕ್ಷರು: ನೀವು ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಇದನ್ನೆಲ್ಲ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ನಾನು ಒಂದೇ ಒಂದು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ತಾವು ಮೂವತ್ತೆಂಟು ತಾಲ್ಲೂಕುಗಳಲ್ಲಿ ಡಿಪಾರ್ಟ್‌ಮೆಂಟ್‌ನಿಂದ ನಡೆಸುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ, ಆ ಮೂವತ್ತೆಂಟು ತಾಲ್ಲೂಕುಗಳಲ್ಲಿ ನಡೆಸುವವರು ದಾಸಪ್ಪ ಅಂಡ್ ಕಂಪನಿಯವರೇ ಯಾರು ಡಿಫಾಲ್ಟರ್ ಇದ್ದಾನೆ, ಅವನ ಕೈಯಲ್ಲೇ ಕೊಟ್ಟು, ಅವನ ಏಜೆಂಟರಿಗೆ ಕೊಟ್ಟು ಇವತ್ತು ನಡೆಸುತ್ತಿದ್ದಾರೆ. ಅದರಿಂದ ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ.

ಅಧ್ಯಕ್ಷರು: ಈ ದಾಸಪ್ಪ ಎನ್ನುವ ಹೆಸರಿನವರು ಒಬ್ಬರೇ ಇದ್ದಾರೆಯೇ ಅಥವಾ ಇಬ್ಬರು ಇದ್ದಾರೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೇನಾಮಿಯಾಗಿ ನೂರು ದಾಸಪ್ಪಗಳನ್ನು ಸೃಷ್ಟಿ ಮಾಡುತ್ತಾರೆ, ಅವರ ಚಾಲಕನೂ ದಾಸಪ್ಪನೇ, ಅವರ ಮನೆಯಲ್ಲಿ ಕೆಲಸ ಮಾಡುವವನು ದಾಸಪ್ಪನೇ, ದಾಸಪ್ಪ ಅಂಡ್ ಕಂಪನಿ.

ಅಧ್ಯಕ್ಷರು: ನಾನು ಏನು ಕೇಳಿದೆ ಎಂದರೆ ಆಗಾಗ್ಗೆ ಈ ದಾಸಪ್ಪನ ಹೆಸರು ಬರುತ್ತಿರುತ್ತದೆ, ಅದೇ ದಾಸಪ್ಪನೇ ಅಥವಾ ಬೇರೆ ದಾಸಪ್ಪನೇ.

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ: ದಾಸಪ್ಪ ಹುಟ್ಟುತ್ತಲೆ ಅದೇ ದಾಸಪ್ಪ, ಸರ್ಕಾರ ಇರುವವರೆಗೆ ದಾಸಪ್ಪ ಇರುತ್ತಾನೆ.

ಅಧ್ಯಕ್ಷರು: ದಾಸಪ್ಪನ ವಿಶೇಷತೆ ಏನೆಂದರೆ, ದಾಸಪ್ಪ ಎಂದರೆ ಮೂರು ನಾಮ ಹಾಕುವವನು, ಈ ದಾಸಪ್ಪ ರಾಜ್ಯಕ್ಕೆ ನಾಮ ಹಾಕುತ್ತಾನೆ.

ಶ್ರೀ ವಾಟಾಳ್ ನಾಗರಾಜ್: ತಾವು ಹೇಳಿದ್ದು ಸರಿ, ಮೂರು ನಾಮಹಾಕತಕ್ಕ ದಾಸಪ್ಪನೇ ಅವಾಗಲೂ ಅದೇ ದಾಸಪ್ಪನೇ, ಈಗಲೂ ಅದೇ ದಾಸಪ್ಪ. ಮುಂದೆಯೂ ಅದೇ ದಾಸಪ್ಪ, ಅದರಲ್ಲೇನೂ ಬದಲಾವಣೆ ಇಲ್ಲ. ಯಾವುದೇ ಸರ್ಕಾರ ಬಂದರೂ ಅದೇ ದಾಸಪ್ಪ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬದಲಾವಣೆ ಇಲ್ಲವೆಂದು ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಸುಮಾರು ಇನ್ನೂರು ಕೋಟಿ ರೂಪಾಯಿಗಳನ್ನು ಮುಳುಗಿಸತಕ್ಕಂಥ ಕೆಲಸವನ್ನು ಸರ್ಕಾರದವರು ಮಾಡಿದರೆ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಅವನು ಹದಿನೇಳು ಕೋಟಿ ರೂಪಾಯಿಗಳನ್ನು ಕೊಡಬೇಕು, ಆ ಹದಿನೇಳು ಕೋಟಿ ರೂಪಾಯಿಗಳನ್ನು ತುಂಬುವುದಿಲ್ಲ, ಡಿಫಾಲ್ಟರ್ ಆಗಿ, ಕೊನೆಗೆ ಇವತ್ತು ಅವನ ಏಜೆಂಟರ್‌ಗಳಿಗೆ ಮೂವತ್ತೆಂಟು ತಾಲ್ಲೂಕುಗಳಲ್ಲಿ....

ಶ್ರೀ ಬಿ.ಎನ್.ಬಚ್ಚೇಗೌಡ: ನಿಮ್ಮ ಅಳ್ವಕೆಯ ಕಾಲದಲ್ಲೂ ಇರಲಿಲ್ಲವೇ?

ಶ್ರೀ.ಎಂ.ಮಲ್ಲೀಕಾರ್ಜುನ ಖರ್ಗೆ: ನನ್ನ ಕಾಲದಲ್ಲಿ ಇದ್ದರೂ ಕೂಡ ನನ್ನನ್ನೂ ನೀವು ಹರಾಜು ಹಾಕಿ; ಬೇಡವೆಂದು ಹೇಳುವುದಿಲ್ಲ. ಆದರೆ ನಾನು ಮಾಡುತ್ತೇನೆಂದು ಸಮರ್ಥನೆ ಮಾಡಿ ಕೊಳ್ಳುವುದು ಬೇಡ. ನಾನು ಒಂದು ಕೋಟಿ ನಷ್ಟ ಮಾಡಿದರೆ ನಿಮಗೆ ಹತ್ತು ಕೋಟಿ ನಷ್ಟ ಮಾಡುತ್ತೇನೆಂದು ಸಮರ್ಥನೆ ಮಾಡಿಕೊಳ್ಳತಕ್ಕಂಥ ಅಧಿಕಾರ ಬರುವುದಿಲ್ಲ, ಅದಕ್ಕಾಗಿ don't plead that. ನಾನು ಒಂದು ಸಣ್ಣ ತಪ್ಪು ಮಾಡಿದ್ದೇನೆಂದು ತಿಳಿದುಕೊಂಡು ಅಥವಾ ನಾನು ಹತ್ತು ಲಕ್ಷ ರೂಪಾಯಿಗಳನ್ನು ನಷ್ಟಮಾಡಿದ್ದೇನೆಂದು ನಿಮಗೆ ಹತ್ತು ಕೋಟಿ ರೂಪಾಯಿಗಳ ನಷ್ಟ ಮಾಡುವಂಥ ಅಧಿಕಾರ ಬರುವುದಿಲ್ಲ; ದಯವಿಟ್ಟು ಅದನ್ನು ತಿಳಿದುಕೊಳ್ಳಿ. ತಾವು ಇವತ್ತು ಅದರ

ಹೆಸರಿನ ಮೇಲೆ ಅಬಕಾರಿ ನೀತಿಯನ್ನು ಪ್ರಕಟಿಸುತ್ತೇವೆಂದು ಹೇಳಿದಿರಿ. ಏನು, ನಾವು ಅರಾಕ್ ಕ್ಲೋಸ್ ಮಾಡುತ್ತೇವೆ, ನಾವು ಪಾನನಿಷೇಧವನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ಹೇಳಿ ಏನು ಮಾಡುವುದೆಂದರೆ ಮೂರು, ಮೂರು ತಿಂಗಳಿಗೆ ಆಕ್ಷನ್ ಮಾಡುತ್ತೇವೆಂದು ಹೇಳುವುದು ಅಥವಾ ಇದ್ದವರಿಗೆ ಮುಂದುವರೆಸತಕ್ಕಂಥದ್ದು. 1995-96, 1996-97, ಅಂಕಿ ಅಂಶಗಳನ್ನು ತೆಗೆದುಕೊಂಡರೆ ಅದರಲ್ಲಿ ಮೂವತ್ತೆಂಟು ಕೋಟಿ, ಮೂವತ್ತೊಂಬತ್ತು ಕೋಟಿ ರೂಪಾಯಿಗಳ ಆದಾಯವಿದೆ, ಇದರಲ್ಲಿ ಎಷ್ಟು ಇದೆ ಎಂದರೆ ಹಾರ್ಡ್ಲಿ ನಲವತ್ತೊಂದು ಕೋಟಿ ರೂಪಾಯಿಗಳು. ಅಂದರೆ, enhancement for 2 years is Rs.2 Crores. ಆ ಲೆಕ್ಕ ತೆಗೆದುಕೊಂಡರೆ ಮೂವತ್ತೆಂಟು, ಮೂವತ್ತೊಂಬತ್ತು ಕೋಟಿ, ಈಗ ನಲವತ್ತೊಂದು ಕೋಟಿ ರೂಪಾಯಿಗಳು. ಅದರಲ್ಲಿ ಆವರೇಜ್ ತೆಗೆದುಕೊಂಡರೆ ಅದರಲ್ಲಿ ಶೇಕಡ ಹತ್ತು ಇಪ್ಪತ್ತು ಹೆಚ್ಚಿಗೆ ಆಗುವುದನ್ನು ಬಿಟ್ಟು, ಹಣಕ್ಕೆ ಸಂಬಂಧಿಸಿದಂತೆ ನೋಡಿದರೆ, ಟರ್ನ್ಓವರ್ ಆಫ್ ಮನಿ ನೋಡಿದರೆ ಅಥವಾ ಸಗತಕ್ಕಂಥ ಆದಾಯವನ್ನು ನೋಡಿದರೆ ಹಿಂದೆಗಿಂತ ಕಡಿಮೆ ಇದೆಯೇ ಹೊರತು ಹೆಚ್ಚಿಗೆ ಏನೂ ಇಲ್ಲ. ಅದಕ್ಕೆ ನಾವು ಈ ಎಲ್ಲಾ ಲೆಕ್ಕವನ್ನು ತೆಗೆದುಕೊಂಡರೆ, ನಾನು ಬೇಕಾದರೆ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಹೇಳುತ್ತೇನೆ. ಇವರ ಲೆಕ್ಕದ ಪ್ರಕಾರ ಇವತ್ತು ಇನ್ನೂರು ಕೋಟಿ ರೂಪಾಯಿಗಳು ಹೋಗಿದೆ, leave out seconds, ಮೋಸ ಮಾಡತಕ್ಕಂಥದ್ದೆಲ್ಲವನ್ನೂ ಬಿಟ್ಟು ಇವರ ಬಾಟ್ಲಿಂಗ್‌ನಿಂದ, ಇವರು 38 ತಾಲ್ಲೂಕುಗಳಲ್ಲಿ ಮುಂದುವರೆಸಕ್ಕಂಥ ನೀತಿಯಿಂದ, ಇವರ ಸ್ವಂತ ನೀತಿಯಿಂದಲೇ ಇವತ್ತು ಇನ್ನೂರು ಕೋಟಿ ರೂಪಾಯಿಗಳು ನಷ್ಟವಾಗಿದೆ, ಬೇಕಾದರೆ ನಾನು ಅಂಕಿಸಂಖ್ಯೆಗಳನ್ನು ಕೊಡುತ್ತೇನೆ,

ಶ್ರೀ ಬಿ.ಎಸ್.ಯಡಿಯೂರಪ್ಪ: ಇವತ್ತು ಇಲ್ಲೇ ಧೀರ್ಘಕಾಲ ಚರ್ಚೆಯಾಯಿತು, ಪಾನನಿಷೇಧವನ್ನು ಜಾರಿಗೆ ತರುತ್ತೇವೆಂದು ಹೇಳಿದರು, ಸಚಿವಸಂಪುಟದ ಉಪಸಮಿತಿಯೊಂದನ್ನು ಮಾಡಿದಿರಿ. ವರದಿ ಕೊಟ್ಟಿದ್ದು ಏನು? ತಾವು ಕಳೆದ ವರ್ಷ ಏತಕ್ಕೆ ಹರಾಜು ಪದ್ಧತಿಯನ್ನು ರದ್ದು ಮಾಡಿದ್ದೇವೆ. ಎಂದರೆ ನಾವು ಪಾನನಿಷೇಧವನ್ನು ಜಾರಿಗೆತರುತ್ತೇವೆ, ಅರಾಕ್ ರದ್ದು ಮಾಡುತ್ತೇವೆ ಅದಕ್ಕಾಗಿ ಸಚಿವಸಂಪುಟದ ಉಪಸಮಿತಿಯನ್ನು ರಚನೆ ಮಾಡಿದ್ದೇವೆಂದು ಹೇಳಿಕೊಂಡು ಬಂದಿರಿ. ಒಂದು ಅಂದಾಜಿನ ಪ್ರಕಾರ ಕಳೆದ ವರ್ಷ ಒಂದು ಐದುನೂರು ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರುವಂಥದ್ದು ನಷ್ಟವಾಗಿದೆ. ನಾನು ಇವತ್ತು ಹೇಳುತ್ತೇನೆ, ದಾಸಪ್ಪ ಅಂಡ್ ಕಂಪನಿ ಎನ್ನುವವರು ಯಾರೂ ಬೆಂಗಳೂರಿನಲ್ಲಿ ಮುಂದೆ ಎಂದು ಹೇಳಿದರಲ್ಲಾ, ಅದೇ ದಾಸಪ್ಪ ಕಂಪನಿಗೆ ಅವನೇ ಪೆಂಡರ್, ಅವನೇ ಎಲ್ಲಾ ವ್ಯವಹಾರ ಮಾಡಿದ, ಇದರ ಬಗ್ಗೆ ನಾನು ಸದನದಲ್ಲಿ ದಾಖಲೆಗಳನ್ನು ಕೊಟ್ಟಿದ್ದೇನೆ. ಅಂದರೆ, ನೀವು ಒಂದು ರೀತಿಯ ಹೆಂಡದ ದೊರೆಗಳು, ಅವನು ದಾಸಪ್ಪನೋ, ತಿಮ್ಮಪ್ಪನೋ, ರಾಮಪ್ಪನೋ, ನಮ್ಮ ಕಾಂಗ್ರೆಸ್ ಸ್ನೇಹಿತರು ಇದ್ದಾಗಲೂ ಅದೇ ಕೆಲಸವನ್ನು ಮಾಡಿದರು, ನಂತರ ಬಂದವರು

ಆದನ್ನೇ ಇವತ್ತು ಮುಂದುವರೆಸಿಕೊಂಡು ಕನಿಷ್ಟ ಈ ಎರಡು ವರ್ಷಗಳಲ್ಲಿ ಐನೂರು ಕೋಟಿ ರೂಪಾಯಿಗಳು ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರುವುದನ್ನು ಪಂಗನಾಮ ಹಾಕಿದ್ದೀರಿ, ನೀವು ಈ ಹೆಂಡದ ದೊರೆಗಳ ಜೊತೆ ಶಾಮೀಲಾಗಿದ್ದೀರಿ, ದೀರ್ಘವಾದ ಚರ್ಚೆಗೆ ಅವಕಾಶ ಮಾಡಿಕೊಡಿ. ಮಾನ್ಯ ವೀರಪ್ಪಮೊಯ್ಲಿಯವರಿದ್ದಾಗ ಸ್ವಲ್ಪ ಬಿಗಿ ಮಾಡುವಂಥ ಪ್ರಯತ್ನವನ್ನು ಮಾಡಿರಬಹುದು, ಆದರೆ ನಮ್ಮ ಅನುಭವಕ್ಕೆ ಬಂದಿರುವಂಥದ್ದು, ಕಾಂಗ್ರೆಸ್ ಸರ್ಕಾರದಲ್ಲಿ, ಜನತಾದಳದ ಸರ್ಕಾರದಲ್ಲಿ ಹೆಂಡದ ದೊರೆಗಳಿಗೆ ರಾಜಾಶ್ರಯ, ಸರ್ಕಾರಕ್ಕೆ ಬರುವಂಥ ಆದಾಯಕ್ಕೆ ಪಂಗನಾಮ ಮಾಡಿಕೊಂಡು ಇವತ್ತು ನಮ್ಮನ್ನು ಈ ದುಸ್ಥಿತಿಗೆ ತಂದಿದ್ದೀರಿ. ದಯಮಾಡಿ ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ, ನೀವು ಹೇಳಿಕೆ ಮಾಡಿದ್ದರಿಂದ ಈ ಹೇಳಿಕೆಯಲ್ಲಿ ಯಾವುದೇ ಸತ್ಯವಿಲ್ಲ, ಅಲ್ಲಿ ಆಡಳಿತ ಪಕ್ಷದವರೇ ಅಲ್ಲಿ ಯಾವ ರೀತಿ ಲೂಟಿ ನಡೆಯುತ್ತಿದೆ ಎನ್ನುವುದನ್ನು ಹೇಳುತ್ತಿದ್ದಾರೆ. ನಿಮಗೆ ಜನ ಮುಖ್ಯವೋ ಅಥವಾ ಹೆಂಡದ ದೊರೆಗಳು ಮುಖ್ಯವೋ ಯಾರು ಮುಖ್ಯವೆನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸರ್ಕಾರದ ಹೇಳಿಕೆ ಪ್ರಕಾರ ರಾಜ್ಯದಲ್ಲಿ ಪಾನನಿಷೇಧ ಪುನಃ ಜಾರಿಗೆತರುವ ಕುರಿತು ಪರಿಶೀಲಿಸಲು ಸರ್ಕಾರವು ಸಚಿವಸಂಪುಟದ ಉಪಸಮಿತಿಯನ್ನು ರಚಿಸಿದೆ ಎಂದು ಇದೆ. ಅಂದರೆ ಇದು ಸಾರಾಯಿ ನಿಷೇಧವೇ ಅಥವಾ ಸಂಪೂರ್ಣ ಪಾನನಿಷೇಧವೇ? ಸಾರಾಯಿ ನಿಷೇಧದ ಬಗ್ಗೆ ಇವರ ಸಮಿತಿ ಇರುತ್ತಿತ್ತು, ಇದು ಸಂಪೂರ್ಣ ಪಾನನಿಷೇಧವೇ? ತಮ್ಮ ಸರ್ಕಾರದ ನಿಲುವೇನು? ಸಂಪೂರ್ಣ ಪಾನನಿಷೇಧದ ಬಗ್ಗೆ ಉಪಸಮಿತಿಯೇ ಅಥವಾ ಸಾರಾಯಿ ಬಗ್ಗೆ ಉಪಸಮಿತಿಯೇ? ಸರ್ಕಾರಕ್ಕೆ ಏನಾದರು ಗೌರವವಿದ್ದರೆ....

ಶ್ರೀ ಎಂ.ಸಿ.ನಾಣಯ್ಯ: ಸಂಪೂರ್ಣವಾಗಿ ಪಾನನಿಷೇಧನೂ ಇಲ್ಲ, ಸಂಪೂರ್ಣವಾಗಿ ಸಾರಾಯಿ ನಿಷೇಧನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಸರ್ಕಾರಕ್ಕೆ, ನಿಮಗೆ ಗೌರವನೂ ಇಲ್ಲ, ನಾಚಿಕೆನೂ ಇಲ್ಲ, ಮಾನನೂ ಇಲ್ಲ, ಮರ್ಯಾದೆನೂ ಇಲ್ಲ, ಇವೆಲ್ಲವನ್ನೂ ಕಳೆದುಕೊಂಡುಬಿಟ್ಟಿದ್ದೀರಿ.

SRI H.SHIVAPPA: Sir, I am on a point of order. I want a ruling whether it is a Zero hour or a discussion or debate. If it is Zero hour, it has lost its significance. What is the definition of Zero hour, I want to know from the chair.

MR.SPEAKER: I totally agree with the Hon'ble Member Sri. H.Shivappa. I have upheld your point of order. It is zero Hour. We should not have gone for the discussion. That is the reason why I have been appealing to the Hon'ble Members time and again to refer to the rule which is currently being invoked and act accordingly. Unfortunately, the Members are not willing to cooperate with me. I totally honour your sentiments.

SRI.H.SHIVAPPA: Every time this is repeated here, sir.

ಶ್ರೀ ಹೆಚ್.ಎನ್.ನಂಜೇಗೌಡ: ಬಹುಶಃ ದಿನಕರ ದೇಸಾಯಿವರದ್ದು ಎಂದು ಕಾಣುತ್ತದೆ, ''ಕದ್ದು ಸೇದುವ ಮಗಗೆ ಬುದ್ಧಿ ಹೇಳುವ ತಂದೆ ತಾ ಮಾತ್ರ ಬಿಡಲಿಲ್ಲ ತನ್ನ ಚಟವ, ಮದ್ಯ ಸೇವಿಸದೆನೇ ನಿದ್ದೆ ಹೋಗದ ದೇವ ಮದ್ಯ ತಡೆಹಿಡಿಯೆ ತಾ ಹಿಡಿದ ಹಠವ'' ಹಾಗಿದೆ ನಿಮ್ಮ ನೀತಿ.

ಶ್ರೀ ಎಂ.ಸಿ.ನಾಣಯ್ಯ: ನಿಮ್ಮದೂ ಕೂಡ ಅದೆರೀತಿ ತಾನೇ?

(ಬ) ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರ ಮೇಲೆ ನಡೆದ ಹಲ್ಲೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರ ಮೇಲೆ ಕೋಲಾರದಿಂದ ಬಂದಂಥ ಕೆಲವು ವಿದ್ಯಾರ್ಥಿಗಳು ಅವರು ಸಭೆಯಲ್ಲಿ ಕುಳಿತಿರತಕ್ಕಂಥ ಸಂದರ್ಭದಲ್ಲಿ ಅವರನ್ನು ಸಭೆಯಿಂದ ಹೊರಗಡೆಗೆ ಎಳೆದುಕೊಂಡು ಹೋಗಿ ಅವರ ಮೇಲೆ ಶಾರೀರಿಕವಾಗಿ ಹಲ್ಲೆ ಮಾಡಿರುವುದು ಇವತ್ತು ಗಮನಕ್ಕೆ ಬಂದಿದೆ. ಅದೇ ರೀತಿಯಲ್ಲಿ ಅಲ್ಲಿ ಶಿಕ್ಷಕರೂ ಕೂಡ ಇದರ ಬಗ್ಗೆ ಪ್ರತಿಭಟಿಸಿ ಧರಣಿ ಮಾಡುತ್ತಿದ್ದಾರೆ. ಮತ್ತೆ ಆ ಶಿಕ್ಷಕರಿಗೆ ಬೆಂಬಲವಾಗಿ ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಕೂಡ ಧರಣಿ ಕುಳಿತಿದ್ದಾರೆ. ಇಡೀ ವಿಶ್ವವಿದ್ಯಾಲಯವೇ ಒಂದು ರೀತಿಯಾಗಿ ಪ್ರಕ್ಷುಬ್ಧ ವಾತಾವರಣದಲ್ಲಿದೆ. ಮತ್ತೆ ಈ ಪರಿಸ್ಥಿತಿ ಹೀಗೆ ಮುಂದುವರೆದರೆ ವಿದ್ಯಾರ್ಥಿಗಳು ಪ್ರಾಧ್ಯಾಪಕರನ್ನು ಹೊಡೆದು, ಹಲ್ಲೆ ಮಾಡಿ ಅಂಕಗಳನ್ನು ಹೆಚ್ಚು ಹಾಕಬೇಕೆಂದು ಒತ್ತಾಯ ಮಾಡುವುದಾದರೆ ನಮ್ಮ ರಾಜ್ಯದ ಶಿಕ್ಷಣದ ಪರಿಸ್ಥಿತಿ ಯಾವ ಮಟ್ಟಕ್ಕೆ ಬರುತ್ತದೆ ಎನ್ನುವ ಬಹಳ ಅಪಾಯದ ಪರಿಸ್ಥಿತಿ ಇವತ್ತು ಮೂಡಿದೆ; ಇದಕ್ಕೆ ಯಾರು ಕಾರಣ? ಏತಕ್ಕೆ ಈ ರೀತಿಯಾಗಿದೆ? ಈ ರೀತಿಯಾಗಿ ವಿಶ್ವವಿದ್ಯಾಲಯಗಳಲ್ಲಿ ಗೂಂಡಾಗಿರಿ ಮಾಡಿ, ಪ್ರಾಧ್ಯಾಪಕರನ್ನು ಹೆದರಿಸಿ, ಸಭೆಯಲ್ಲಿದ್ದಾಗ ಕತ್ತಿನಪಟ್ಟಿಯನ್ನು ಹಿಡಿದುಕೊಂಡು ಬಂದು ಅವರನ್ನು ಹೊಡೆದು, ಅವರ ಮೇಲೆ ದೂರನ್ನು ಕೊಟ್ಟರೆ,